ಅವಳ ಮುಖದ ನುಣುಪು ಮುದ್ದು ಉಕ್ಕಿಸುತ್ತಿತ್ತು. ಅವಳು ಮೆತ್ತನೆಯ ತುಟಿಗಳನ್ನ ಅವನ ಕೆನ್ನೆಗಳಿಗೆ ಉಜ್ಜಿ, ಅವುಗಳನ್ನು ಗಟ್ಟಿಯಾಗಿ ಚುಂಬಿಸಿದಳು. ಅವಳ ತೆರೆದ ಎದೆಯ ನಡುವಲ್ಲಿ ಬಂಗಾರದ ಶಿಲುಬೆ ಮಿನುಗುತ್ತಿತ್ತು. ತುಂಬಾ ವಿಶೇಷ ಸಂದರ್ಭಗಳಿಗಾಗಿ ಮೀಸಲಿಟ್ಟಿದ್ದ, ಅವಳ ಬಳಿ ಇದ್ದ ಏಕೈಕ ಶುದ್ಧ ರಾತ್ರಿಉಡುಪನ್ನು ತೊಟ್ಟಿದ್ದಳು.

'ಅಬ್ಬಾ, ಅದೆಷ್ಟು ದೃಢವಾಗಿ ನಂಬಿದ್ದೆ ನಾನು' ಅವಳು ಹದಿಹರೆಯದ ಹುಡುಗಿಯಾಗಿದ್ದಾಗಿನ ದಿನಗಳನ್ನು ನೆನಪಿಸಿಕೊಳ್ಳಲು ಯತ್ನಿಸುತ್ತಾ ಸ್ಟ್ರೆಶ್ನೆಫ್ ಅಂದುಕೊಳ್ಳುತ್ತಾನೆ, 'ಅದೆಂಥಾ ಅಚಲ ನಂಬಿಕೆಯಾಗಿತ್ತು ನನ್ನದು ಆ ಹದಿನೈದು ವರ್ಷಗಳ ಹಿಂದಿನದು, ಕೇವಲ ಅವಳ ಒಂದೇ ಒಂದು ಗುಟ್ಟಿನ ಭೇಟಿಗಾಗಿ ಒಂದು ಚಣವೂ ಹಿಂದೂ ಮುಂದೂ ನೋಡದೆ ಅದೆಷ್ಟು ಖುಷಿಯಿಂದ ನನ್ನ ಬದುಕಿನ ಹದಿನೈದು ವರ್ಷಗಳನ್ನು ಇಡಿಯಾಗಿ ಸಮರ್ಪಿಸಿಕೊಂಡುಬಿಟ್ಟಿದ್ದೆ!'

## 3

ಬೇಗ ಬೆಳಕು ಹರಿಯುವಂತಿತ್ತು. ಹಾಸಿಗೆಯ ಪಕ್ಕದ ನೆಲದಲ್ಲಿ ಮೇಣದ ಬತ್ತಿ ಉರಿಯುತ್ತಿತ್ತು. ಸ್ಟ್ರೆಶ್ನೆಫ್ ಅಂತರನಾಗಿ ಉದ್ದಕ್ಕೆ ಕಾಲು ನೀಡಿ ಮಲಗಿದ್ದ. ಅವನ ಶರ್ಟಿನ ಕಾಲರ್ ಗುಂಡಿಗಳು ಬಿಚ್ಚಿಕೊಂಡಿದ್ದವು. ಅವನ ಪುಟ್ಟ ಮೂಗು ಬಿಗುಮಾನದಿಂದ ನೆರಳಿನತ್ತ ವಾಲಿತ್ತು. ಕೈಗಳು ತಲೆಯಿಂದಾಚೆಗೆ ಹಿಂಬದಿಗೆ ಚಾಚಿಕೊಂಡಿದ್ದವು. ಮೊಣಕೈಗಳನ್ನು ಮಂಡಿಗೆ ಆನಿಸಿಕೊಂಡು ವಿಯರ ಅವನ ಪಕ್ಕದಲ್ಲಿ ಕೂತಿದ್ದಳು. ಅವಳ ಚಂದದ ಕಣ್ಣುಗಳು ಕೆಂಪಗಾಗಿ, ಅಳುವಿನಿಂದಾಗಿ ಬಾತುಕೊಂಡಿದ್ದವು. ಸಿಗರೇಟು ಸೇದುತ್ತಾ, ಬೇಸರದ ದೃಷ್ಟಿಯನ್ನು ನೆಲದಲ್ಲಿ ನೆಟ್ಟಿದ್ದಳು. ಕಾಲುಗಳನ್ನು ಒಂದರ ಮೇಲೊಂದು ಹಾಕಿ ಕೂತ ಅವಳು ತನ್ನ ಕೋಮಲ ಕಾಲುಗಳನ್ನು ನೋಡಿಕೊಂಡಳು. ಅಲ್ಲಿದ್ದ ದುಬಾರಿ ಶೂಗಳು ಅವಳಿಗೆ ಹಿತವೆನಿಸಿದವು. ಆದರೂ ಅವಳ ಎದೆಯೊಳಗಾಡುತ್ತಿದ್ದ ನೋವು ಮಾತ್ರ ದೀಡಾಗಿತ್ತು.

'ನಾನು ನಿನಗಾಗಿ ಎಲ್ಲವನ್ನೂ ತ್ಯಾಗ ಮಾಡಿದ್ದೇನೆ' ಅಂದಳು ಮೆಲ್ಲಗೆ. ಆಗ ಅವಳ ತುಟಿಗಳು ಕಂಪಿಸುತ್ತಿದ್ದವು.

ಅವಳ ದನಿಯಲ್ಲಿ ಗಾಢ ಪ್ರೀತಿಯಿತ್ತು ಅಂತೆಯೇ ಶಿಶು ಸಹಜ ದುಃಖವಿತ್ತು.

ಕಣ್ಣುಗಳನ್ನು ತೆರೆದ ಸ್ಟ್ರೆಶ್ನೆಫ್ ಅವಳನ್ನು ತಣ್ಣಗೆ ಕೇಳಿದ:

'ಏನು ತ್ಯಾಗ ಮಾಡಿದ್ದೀಯ ನೀನು?'

'ಓಹ್, ಏನೂ ಅಂದರೆ ಎಲ್ಲದನ್ನೂ, ನನ್ನದೆನ್ನುವ ಸಕಲವನ್ನೂ... ನನ್ನ ಮಾನ, ನನ್ನ ಯೌವ್ವನ...'

'ಯೌವ್ವನ ಅನ್ನೋದು ನಮ್ಮಲೀಗ ಭಯಾನಕವಾಗಿ ತುಂಬಿ ತುಳುಕುತ್ತಿಲ್ಲ.'

'ಎಷ್ಟು ಒರಟ ನೀನು, ನೀನು ನನ್ನನ್ನ ಅರ್ಥಮಾಡಿಕೊಳ್ಳುವುದೇ ಇಲ್ಲ!' ಅಂದಳವಳು ಮೃದುವಾಗಿ.

'ಈ ಭೂಮಿಯ ಮೇಲಿನ ಎಲ್ಲಾ ಹೆಣ್ಣುಗಳೂ ಸದಾ ಹೇಳುವುದು ಇದನ್ನೇ. 'ಅರ್ಥಮಾಡಿಕೊಳ್ಳುವಿಕೆ' ಅವರ ಅತ್ಯಂತ ಅಚ್ಚುಮೆಚ್ಚಿನ ಪದ, ಆದರದನ್ನವರು ಬೇರೆ ಬೇರೆ ರೀತಿಯಲ್ಲಿ ಬಳಸುತ್ತಾರೆ, ಅಷ್ಟೆ. ಮೊದಲು ಖುಷಿಯಿಂದ ಮತ್ತು ಹೊಗಳಿಕೆಯಿಂದ: 'ನೀನೆಷ್ಟು ಬುದ್ಧಿವಂತ, ಅದೆಷ್ಟು ಚೆನ್ನಾಗಿ ನೀನು ನನ್ನನ್ನು ಅರ್ಥ ಮಾಡಿಕೊಳ್ಳುತ್ತೀಯಾ!' ಕಡೆಗೆ: 'ಎಂಥ ಒರಟ ನೀನು, ನನ್ನನ್ನ ನೀನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ!'

ಅವಳು ಮೆಲ್ಲಗೆ ಅಳುತ್ತಾ, ಅವನ ಮಾತುಗಳನ್ನು ಕೇಳಿಸಿಕೊಳ್ಳುತ್ತಿಲ್ಲವೇನೋ ಎಂಬಂತೆ ಮುಂದುವರಿಸಿದಳು: